(ಸಿಪಿಸಿಆರ್‌ಐ)ಸ್ಥಾಪನಾ ದಿನ, ಕೃಷಿ ವಿಜ್ಞಾನ ಕೇಂದ್ರದ ಬೆಳ್ಳಿಹಬ್ಬ ಸಮಾರಂಭ, ಆತ್ಮ ತಂತ್ರಜ್ಞಾನ ಸಂಗಮ

# ಕಾಸರಗೋಡಿನಲ್ಲಿ ಕೃಷಿಕರ ಸಮಾವೇಶಕ್ಕೆ ಸಚಿವರಿಂದ ಚಾಲನೆ

Udayavani 6/1/18






ಕಾಸರಗೋಡು, ಜ.5: ಕಾಸರಗೋಡು ಕೇಂದ್ರೀಯ ತೋಟ ಬೆಳೆಗಳ ಸಂಶೋಧನಾ ಸಂಸ್ಥೆ (ಸಿಪಿಸಿಆರ್‌ಐ)ಸ್ಥಾಪನಾ ದಿನ ಹಾಗೂ ಕೃಷಿ ವಿಜ್ಞಾನ ಕೇಂದ್ರದ ಬೆಳ್ಳಿ ಹಬ್ಬ ಸಮಾರಂಭ, ಆತ್ಮ ತಂತ್ರಜ್ಞಾನ ಸಂಗಮದಂಗವಾಗಿ ಕೃಷಿಕರ ಸಮಾವೇಶ ಡಿ.5 ರಂದು ಆರಂಭಗೊಂಡಿತು.

ರಾಜ್ಯ ಕಂದಾಯ ಸಚಿವ ಇ.ಚಂದ್ರಶೇಖರನ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕೃಷಿ ಬಗೆಗಿನ ಸಂಶೋಧನೆ ಕೃಷಿಕರಿಗೆ ತಲುಪಬೇಕು. ಈಗಾಗಲೇ ಹಲವು ಸಾಧನೆಗಳಿಂದ ಗುರುತಿಸಿಕೊಂಡಿರುವ ಸಿಪಿಸಿಆರ್‌ಐ ಕೃಷಿಕರಿಗೆ ನೆರವಾಗುತ್ತಿದ್ದು, ಕೃಷಿಗೆ ಎದುರಾಗುತ್ತಿರುವ ರೋಗಗಳ ಬಗ್ಗೆ ಆಗಾಗ ಮಾಹಿತಿ ನೀಡಬೇಕು. ಕೇರಳ ಸರಕಾರವೂ ಕೃಷಿಕರ ಸಮಸ್ಯೆ ಪರಿಹರಿಸಲು ವಿವಿಧ ಯೋಜನೆಗಳನ್ನು ಜಾರಿಗೊಳಿಸಿದೆ ಎಂದರು.

ಕೃಷಿಕರ ಸಮಾವೇಶದ ಬಗ್ಗೆ ಪ್ರಿನ್ಸಿಪಲ್ ಅಗ್ರಿಕಲ್ಚರಲ್ ಅಧಿಕಾರಿ ಟಿ.ಆರ್.ಉಷಾದೇವಿ ಮಾಹಿತಿ ನೀಡಿದರು. ಐಎಂಸಿ ಸದಸ್ಯ ಸುರೇಶ್ ಕುಮಾರ್ ಶುಭಹಾರೈಸಿದರು. ಸಿಪಿಸಿಆರ್‌ಐ ನಿರ್ದೇಶಕ ಡಾ|ಪಿ. ಚೌಡಪ್ಪ ಅವರು ಸ್ವಾಗತಿಸಿದರು. ಕಾರ್ಯಕ್ರಮದ ಸಂಚಾಲಕ ಡಾ|ಸಿ. ತಂಬಾನ್ ವಂದಿಸಿದರು.

ಜ.5 ರಂದು ನೆಲ-ಜಲ ಸಂರಕ್ಷಣಾ ತಂತ್ರಜ್ಞಾನಗಳು ವಿಚಾರಗೋಷ್ಠಿ ಮಧ್ಯಾಹ್ನ ಉತ್ತಮ ಮೌಲ್ಯದ ಹಾಗೂ ಕಡಿಮೆ ಬಳಕೆಯಲ್ಲಿರುವ ಹಣ್ಣುಗಳ ಕೃಷಿ ಕುರಿತು ವಿಚಾರಗೋಷ್ಠಿ ನಡೆಯಿತು. ಜ.6 ರಂದು ಬೆಳಗ್ಗೆ ಕೊಕ್ಕೋ ಉತ್ಪಾದನೆ ಮತ್ತು ಸಂಸ್ಕರಣೆ, ಮಧ್ಯಾಹ್ನ 2 ರಿಂದ ಮೀನು ಸಾಕಣೆ, ಹೈನುಗಾರಿಕೆ, ಕೋಳಿ ಸಾಕಣೆ ಮತ್ತು ಆಡು ಸಾಕಣೆ, 7ರಂದು ಬೆಳಗ್ಗೆ ಹಸಿರು ಉದ್ಯಮಕ್ಕೆ ಚಾಲನೆ-ಕೃಷಿ ಕೈಗಾರಿಕಾ ಸಬಲೀಕರಣ, 8ರಂದು ಮಧ್ಯಾಹ್ನ ಕೃಷಿಕರು, ವಿಜ್ಞಾನಿಗಳು ವಿಚಾರ ವಿನಿಮಯ ನಡೆಯುವುದು.

ಜ. 9ರಂದು ಬೆಳಗ್ಗೆ ಜೇನು ಸಾಕಣೆ, 10ರಂದು ಬೆಳಗ್ಗೆ ನಗರ ಹಾಗೂ ನಗರದ ಹೊರವಲಯದ ತೋಟಗಾರಿಕೆ, ಮಧ್ಯಾಹ್ನ ತೆಂಗು, ಮಾವು ಹಾಗೂ ಹಲಸಿನ ಬಳಕೆಯಲ್ಲಿ ಮೌಲ್ಯಮಾಪನ ಕುರಿತಾಗಿ ವಿಚಾರಸಂಕಿರಣ ನಡೆಯಲಿದೆ. ಇದೇ ಸಂದರ್ಭದಲ್ಲಿ ಕೃಷಿ ಸಂಬಂಧಿತ ಪ್ರದರ್ಶನಗಳು ನಡೆಯಲಿದೆ.

ಜ. 8ರಂದು ಬೆಳಗ್ಗೆ 11 ಗಂಟೆಗೆ ಕಿಸಾನ್ ಮೇಳ ಉದ್ಘಾಟನೆಗೊಳ್ಳಲಿದೆ. ಕಾಸರಗೋಡು ಸಂಸದ ಪಿ.ಕರುಣಾಕರನ್ ಅಧ್ಯಕ್ಷತೆ ವಹಿಸುವರು. ಕೇಂದ್ರ ಸಚಿವ ಡಿ. ವಿ. ಸದಾನಂದ ಗೌಡ ಕಾರ್ಯಕ್ರಮವನ್ನು ಉದ್ಘಾಟಿಸುವರು.

ಕೇಂದ್ರ ಸಚಿವ ಅನಂತ ಕುಮಾರ್ ಹೆಗಡೆ ಅವರು ಅಗ್ರಿ-ಬ್ಯುಸಿನೆಸ್ ಎಕ್ಸ್‌ಪೋ ಉದ್ಘಾಟಿಸುವರು. ಪ್ರಥಮ ಅಂಚೆ ಕಾರ್ಡ್‌ನ್ನು ಪೋಸ್ಟ್ ಮಾಸ್ಟರ್ ಜನರಲ್ ಎಸ್.ಎಫ್.ಎಚ್. ರಿಜ್ವಿ ಬಿಡುಗಡೆಗೊಳಿಸುವರು. ಇದೇ ಸಂದರ್ಭದಲ್ಲಿ ಉತ್ತಮ ತೆಂಗು, ಅಡಿಕೆ, ಕೊಕ್ಕೋ ಕೃಷಿಕರನ್ನು ಗೌರವಿಸಲಾಗುವುದು.

ಮಂಗಳೂರು ಸಂಸದ ನಳಿನ್ ಕುಮಾರ್ ಕಟೀಲು ಅವರು ಸಂಚಿಕೆಯನ್ನು ಬಿಡುಗಡೆಗೊಳಿಸುವರು.

ಶಾಸಕ ಎನ್.ಎ.ನೆಲ್ಲಿಕುನ್ನು, ಕಾಸರಗೋಡು ಜಿಲ್ಲಾ ಪಂಚಾಯತ್ ಅಧ್ಯಕ್ಷ ಎಜಿಸಿ ಬಶೀರ್, ಡಾ| ಬಿ.ಎಸ್.ಎಸ್.ಮೂರ್ತಿ, ಮೊಗ್ರಾಲ್ ಪುತ್ತೂರು ಪಂಚಾಯತ್ ಅಧ್ಯಕ್ಷ ಎ.ಎ.ಜಲೀಲ್ ಹಾಗೂ ಆತ್ಮ ಯೋಜನಾ ನಿರ್ದೇಶಕಿ ಕೆ.ಟಿ.ಲೀನಾ ಅವರು ಶುಭಹಾರೈಸುವರು.